ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 635

ಸದಸ್ಯರ ಹೆಸರು : ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 05-03-2021

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಮ್ಯಾಕ್ಸಿಕ್ಯಾಬ್ ಅಥವಾ ಇತರೆ ವಾಹನಗಳು ತಮಗೆ ನಿಗದಿಪಡಿಸಿದ ಪ್ಯಾಸೆಂಜರ್‌ಗಳಿಗಿಂತ ಹೆಚ್ಚಿನ ಪ್ರಯಾಣಿಕರನ್ನು ತುಂಬಿಕೊಂಡು ಪ್ರಯಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸಾರಿಗೆ ಆಯುಕ್ತರ ಸುತ್ತೋಲೆ ಸಂಖ್ಯೆ: ಸಾಆ/ನೋಂದಣಿ-1/ಪಿಆರ್-81/2003-04, ದಿನಾಂಕ:14-02-2020ರಲ್ಲಿ, 12+1 ಆಸನ ಸಾಮರ್ಥ್ಯ ಹೊಂದಿ ಮ್ಯಾಕ್ಸಿಕ್ಯಾಬ್ ವಾಹನವಾಗಿ ನೋಂದಣಿಯಾಗಿ, ನಿಗದಿತ ಆಸನ ಸಾಮರ್ಥ್ಯ ಮೀರಿ ಹೆಚ್ಚುವರಿ ಆಸನಗಳನ್ನು ಅಳವಡಿಸಿಕೊಂಡಿದ್ದಲ್ಲಿ ಅಥವಾ ಅಳವಡಿಸಿಕೊಳ್ಳಲು ಇಚ್ಛಿಸಿದಲ್ಲಿ ಅಂತಹ ವಾಹನಗಳ ನೋಂದಣಿ ಪ್ರಮಾಣಪತ್ರದಲ್ಲಿ ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 151(2) ರಂತೆ ಆಸನಗಳ ಸಂಖ್ಯೆ ನಮೂದಿಸಿ ಸೂಕ್ತ ಮಾರ್ಪಾಡು ಮಾಡಿ ಹೊಸ ನೋಂದಣಿ ಪ್ರಮಾಣಪತ್ರವನ್ನು ನೀಡುವಂತೆ ಸೂಚಿಸಲಾಗಿದೆ.
(ಆ)	ಈ ರೀತಿ ನಿಯಮ ಉಲ್ಲಂಘನೆ ಮಾಡಿರುವ ವಾಹನಗಳ ಮೇಲೆ ಯಾವ ಕ್ರಮ ಕೈಗೊಂಡಿರುತ್ತೀರಿ? (ವಿವರ ನೀಡುವುದು)	ಆಯಾ ಚಕತಳದ ಆಧಾರದ ಮೇಲೆ ಮ್ಯಾಕ್ಸಿಕ್ಯಾಬ್ ವಾಹನಗಳನ್ನು 16+1 ರಿಂದ 20+1 ಆಸನಗಳವರೆಗೆ ಮಾರ್ಪಡಿಸಿಕೊಂಡು ಒಪ್ಪಂದ ವಾಹನಗಳಾಗಿ ಪರಿವರ್ತಿತವಾಗಿರುವ ಬಗ್ಗೆ ನಿಯಮಾನುಸಾರ ವಾಹನಗಳ ಆಸನ ಸಾಮರ್ಥ್ಯವನ್ನು ಪರೀಕ್ಷಿಸಿ, ಅಂತಹ ವಾಹನಗಳಿಗೆ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿಯಮಗಳು ಮತ್ತು ಕಾಯ್ದೆ 1957ರಡಿ ಅನ್ವಯವಾಗುವ ತೆರಿಗೆಯನ್ನು ವಿಧಿಸಲೂ ಸಹ ರಾಜ್ಯದ ಎಲ್ಲಾ ನೋಂದಣಿ ಪ್ರಾಧಿಕಾರಗಳಿಗೆ ಸೂಚಿಸಲಾಗಿರುತ್ತದೆ. ಇದಲ್ಲದೆ, ನಿಯಮ ಉಲ್ಲಂಘನೆ ಮಾಡಿ ಹೆಚ್ಚಿನ ಪ್ರಯಾಣಿಕರನ್ನು ಸಾಗಿಸುತ್ತಿರುವ ಮ್ಯಾಕ್ಸಿಕ್ಯಾಬ್ ವಾಹನಗಳ ತೀವ್ರ ತಪಾಸಣೆ ಕೈಗೊಳ್ಳುತ್ತಿದ್ದು, ಮ್ಯಾಕ್ಸಿಕ್ಯಾಬ್ ವಾಹನಗಳನ್ನು ತಪಾಸಣೆಗೊಳಪಡಿಸಿ ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ, ರಾಜಿ ದಂಡವನ್ನು ವಸೂಲಿ ಮಾಡಲಾಗುತ್ತಿದ್ದು, ಸಾರಿಗೆ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ವಸೂಲಿ ಮಾಡಿರುವ ದಂಡದ ವಿವರಗಳನ್ನು '**ಅನುಬಂಧ**ದಲ್ಲಿ ಒದಗಿಸಿದೆ. ಮುಂದುವರೆದು, ಪೋಲೀಸ್ ಇಲಾಖೆಯಿಂದ ಮೋಟಾರು ವಾಹನಗಳ ಕಾಯ್ದೆ 1988 ರನ್ವಯ ಪ್ರಕರಣಗಳನ್ನು ದಾಖಲಿಸಿ ದಂಡವನ್ನು ವಸೂಲಿ ಮಾಡಲಾಗುತ್ತಿದ್ದು, ಕಳೆದ ಮೂರು ವರ್ಷಗಳಲ್ಲಿ ವಸೂಲಿ ಮಾಡಿರುವ ದಂಡದ ವಿವರಗಳನ್ನು '**ಅನುಬಂಧ**ದಲ್ಲಿ ಒದಗಿಸಿದೆ.

ಟಿಡಿ 26 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 635 ಗೆ ಅನುಬಂಧ

ಕಳೆದ ಮೂರು ವರ್ಷಗಳಲ್ಲಿ ಮ್ಯಾಕ್ಸಿ ಕ್ಯಾಬ್ ಮತ್ತು ಇತರೆ ವಾಹನಗಳನ್ನು ತಪಾಸಣೆ ಮಾಡಿರುವ ವಿವರಗಳು

ಸಾರಿಗೆ ಇಲಾಖೆ:

ಅವಧಿ	ತಪಾಸಣೆ ನಡೆಸಿದ ವಾಹನಗಳ ಸಂಖ್ಯೆ	ಪ್ರಕರಣ ದಾಖಲಿಸಿದ ಸಂಖ್ಯೆ	ಸಂಗ್ರಹಿಸಿದ ಒಟ್ಟು ಮೊತ್ತ (ರೂ.ಗಳಲ್ಲಿ)
01-04-2018 to 31-03-2019	3,94,294	12,696	10,91,38,115
01-04-2019 to 31-03-2020	1,49,705	9,221	11,17,85,795
01-04-2020 to 31-01-2021	67,872	12,251	4,78,27,928
ಒಟ್ಟು	**6,11,871**	**34,168**	**26,87,51,838**

ಒಳಾಡಳಿತ ಇಲಾಖೆ:

ವಾಹನಗಳ ವಿವರ	2018		2019		2020	
	ದಾಖಲಿಸಿದ ಒಟ್ಟು ಪ್ರಕರಣಗಳ ಸಂಖ್ಯೆ	ವಿಧಿಸಿದ ಒಟ್ಟು ದಂಡದ ಮೊತ್ತ	ದಾಖಲಿಸಿದ ಒಟ್ಟು ಪ್ರಕರಣಗಳ ಸಂಖ್ಯೆ	ವಿಧಿಸಿದ ಒಟ್ಟು ದಂಡದ ಮೊತ್ತ	ದಾಖಲಿಸಿದ ಒಟ್ಟು ಪ್ರಕರಣಗಳ ಸಂಖ್ಯೆ	ವಿಧಿಸಿದ ಒಟ್ಟು ದಂಡದ ಮೊತ್ತ
ಮ್ಯಾಕ್ಸಿ ಕ್ಯಾಬ್	12359	16,13,745	22504	34,19,119	32016	63,77,620
ಇತರೆ ವಾಹನಗಳು	276597	3,59,63,373	443103	8,46,57,760	789520	17,73,54,070
ಒಟ್ಟು	**288956**	**3,75,77,118**	**465607**	**8,80,76,879**	**821536**	**18,37,31,690**

****